ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
KARNATAKA LEGISLATIVE ASSEMBLY RESEARCH AND REFERENCE BRANCH

ಪತ್ರಿಕಾ ತುಣುಕುಗಳು
PAPER CLIPPINGS

ಇಲಾಖೆ / ವಿಷಯ: DEPARTMENT / SUBJECT: ಸಭಾಧ್ಯಕ್ಷರು

ಪತ್ರಿಕೆಯ ಹೆಸರು : NAME OF THE NEWS PAPER : ಪ್ರಜಾವಾಣಿ

ದಿನಾಂಕ : DATE : 28/07/2019

# ಸ್ಪೀಕರ್ ವಿರುದ್ಧವೇ ಅವಿಶ್ವಾಸ?

ಪ್ರ.ವಾ. 28-7-19

ತಮ್ಮ ಪಾಳಯದ ಬೆಂಬಲಕ್ಕೆ ನಿಂತಿರುವ 14 ಶಾಸಕರನ್ನು ಸಭಾಧ್ಯಕ್ಷರು ಅನರ್ಹಗೊಳಿಸುವ ಸಾಧ್ಯತೆ ಇದೆ ಎಂಬ ಆತಂಕಕ್ಕೆ ಸಿಲುಕಿರುವ ಆಡಳಿತಾರೂಢ ಬಿಜೆಪಿ, ಅವರ ವಿರುದ್ಧವೇ ಅವಿಶ್ವಾಸ ನಿರ್ಣಯ ಮಂಡಿಸುವ ಚಿಂತನೆ ನಡೆಸಿದೆ.



ಸೋಮವಾರ ವಿಧಾನಸಭೆ ಕಲಾಪ ಆರಂಭವಾಗಲಿದ್ದು, ಬಹುಮತ ಸಾಬೀತುಪಡಿಸುವ ಪ್ರಕ್ರಿಯೆ ನಡೆಯಲಿದೆ. 14 ಶಾಸಕರನ್ನು ಕಲಾಪದಿಂದ ಹೊರಗುಳಿಯುವಂತೆ ನೋಡಿಕೊಂಡು ಬಹುಮತ ನಿರ್ಣಯದಲ್ಲಿ ಗೆಲ್ಲುವುದು ಮೊದಲ ಭಾಗ.

'ಆ ಹೊತ್ತಿನೊಳಗೆ ಸಭಾಧ್ಯಕ್ಷರು ರಾಜೀನಾಮೆ ಕೊಡಬಹುದು. ಕೊಡದೇ ಇದ್ದರೆ ಅವರ ವಿರುದ್ಧವೇ ಅವಿಶ್ವಾಸ ನಿರ್ಣಯ ಮಂಡಿಸುವುದು. ಹೀಗೆ ನಿರ್ಣಯ ಮಂಡಿಸಿದ ಬಳಿಕ ಸಭಾಧ್ಯಕ್ಷ ಹುದ್ದೆಯಲ್ಲಿರುವವರು ಪ್ರಮುಖ ನಿರ್ಣಯ ತೆಗೆದುಕೊಳ್ಳುವಂತಿಲ್ಲ. ಹೀಗೆ ಮಾಡುವ ಮೂಲಕ ಶಾಸಕರನ್ನು 'ಅನರ್ಹತೆ'ಯಿಂದ ಬಚಾವು ಮಾಡುವುದು ಸದ್ಯದ ಲೆಕ್ಕಾಚಾರ' ಎಂದು ಬಿಜೆಪಿ ಮೂಲಗಳು ಹೇಳಿವೆ.